# ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)

# ಕರ್ನಾಟಕ

ಮಾನ್ಯ ಮಾಧ್ಯಮ ಪ್ರತಿನಿಧಿಗಳೇ ಹೋರಾಟದ ಶುಭಾಶಯಗಳು. ಗುಲ್ಬರ್ಗದಲ್ಲಿ ವಿದ್ಯುತ್ ಸ್ಥಾವರದ ನೆವದಲ್ಲಿ  ಕೃಷಿಯೋಗ್ಯ ಭೂಮಿಯನ್ನು ವಶಪಡಿಸಿ ಬಡ ರೈತರನ್ನು ಒಕ್ಕಲೆಬ್ಬಿಸಿ ಬಿಸುಡುವ ಹುನ್ನಾರ ನಡೆಸುತ್ತಿರುವುದರ ಬಗ್ಗೆ ನಮ್ಮ ಈ ಹೇಳಿಕೆಯನ್ನು  ಬಿಡುಗಡೆ ಮಾಡುತ್ತಿದ್ದೇವೆ. ಇದನ್ನು ಪರಿಗಣಿಸಿ ಪ್ರಕಟಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ.

ಹೋರಾಟದಲ್ಲಿ ತಮ್ಮೊಂದಿಗೆ. **ಗಂಗಾಧರ**

**19-05-2010** **ಸಿ.ಪಿ.ಐ (ಮಾವೋವಾದಿ)**

**ಕರ್ನಾಟಕ**

---

**ಥರ್ಮಲ್ ವಿದ್ಯುತ್ ಸ್ಥಾವರ ನಿರ್ಮಾಣದ ಹೆಸರಿನಲ್ಲಿ ಗುಲ್ಬರ್ಗದ ಹೊನ್ನಕಿರಣಗಿ, ಫಿರೋಜಾಬಾದ್, ನಡಿಸಿನ್ನೂರು ಗ್ರಾಮಗಳಿಗೆ ಸೇರಿದ 1500 ಕ್ಕೂ ಹೆಚ್ಚು ಏಕರೆ  ಫಲವತ್ತಾದ ಭೂಮಿಯನ್ನು ವಶಪಡಿಸಿಕೊಂಡು 15000ಕ್ಕೂ ಹೆಚ್ಚು ರೈತರನ್ನು ಒಕ್ಕಲೆಬ್ಬಿಸಿ ಬದುಕು ನಾಶ ಮಾಡಲು ಹೊರಟಿರುವ ಸರ್ಕಾರದ ಅಕ್ರಮಗಳನ್ನು ನಾವು ತೀವ್ರವಾಗಿ ಖಂಡಿಸುತ್ತಿದ್ದೇವೆ.**

**ಸರ್ಕಾರದ ಈ ಅಕ್ರಮಗಳನ್ನು ಪ್ರಶ್ನಿಸಿ ಪ್ರತಿಭಟಿಸಿದ್ದಕ್ಕಾಗಿ ಜನರ ಮೇಲೆ ಸಮಾಜವಿರೋಧಿಗಳ ಮೇಲೆ ಹಾಕುವ ಮೊಕದ್ದಮೆಗಳನ್ನು ಹಾಕಿ ದೌರ್ಜನ್ಯಗಳನ್ನು ನಡೆಸಲಾಗುತ್ತಿದೆ. ಜನರು ಸರ್ಕಾರದ ಕಿರುಕುಳ ತಾಳಲಾರದೇ ತಾವಾಗಿಯೇ ತಮ್ಮ ಜಮೀನುಗಳನ್ನು ಬಿಟ್ಟುಕೊಡುವಂತೆ ಮಾಡುವ– ಉಸಿರುಗಟ್ಟಿಸಿ ಓಡಿಸುವ ದುಷ್ಟನೀತಿಗಳನ್ನು ಸರ್ಕಾರ ಅನುಸರಿಸುತ್ತಿದೆ. ಆದರೆ ಬಾಯಲ್ಲಿ ಮಾತ್ರ ಯಾರಿಂದಲೂ ಬಲವಂತವಾಗಿ ಭೂಮಿ ವಶ ಪಡಿಸಿಕೊಳ್ಳುವುದಿಲ್ಲ ಒಣಮಾತು ಉದುರಿಸುತ್ತಿರುತ್ತಾರೆ**

ಭೂ ಬ್ಯಾಂಕ್ ಹೆಸರಲ್ಲಿ, ಅಭಿವೃದ್ಧಿ ಹೆಸರಿನಲ್ಲಿ, ಗಣಿಗಾರಿಕೆ ಹೆಸರಿನಲ್ಲಿ, ಅರಣ್ಯ ಯೋಜನೆಗಳ ಹೆಸರಿನಲ್ಲಿ ಜನರ ಭೂಮಿಗಳನ್ನು ಕಬಳಸುವ ಜನವಿರೋಧಿ ಕಾರ್ಯಗಳನ್ನು ಸರ್ಕಾರಗಳು ಮಾಡುತ್ತಲೇ ಬರುತ್ತಿವೆ. ಇಂತಹ ದುಷ್ಟತನಗಳ ವಿರುದ್ಧ ಕರ್ನಾಟಕದ ಮಲೆನಾಡು

ಕರಾವಳಿಯ ಜನರು, ಪಶ್ಚಿಮ ಬಂಗಾಳದ ನಂದಿಗ್ರಾಮ, ಸಿಂಗೂರು, ಲಾಲ್‌ಗಡ, ಒಡಿಸ್ಸದ ಕಳಿಂಗನಗರ, ನಾರಾಯಣ ಪಟ್ಣಗಳ ಜನರು ಧೀರೋದಾತ್ತವಾಗಿ ಹೋರಾಡುತ್ತಿರುವುದನ್ನು ನಾವಿಲ್ಲಿ ಗಮನಿಸ ಬೇಕಾಗಿದೆ. ಅದರಲ್ಲೂ ಲಾಲ್ ಗಡದ ಜನರು ಮತ್ತೊಂದು ಹೆಜ್ಜೆ ಮುಂದೆ ಹೋಗಿ ಇಂತಹ ವಿನಾಶಕಾರಿ ಯೋಜನೆಗಳಿಗೆ ಕಾರಣಕರ್ತರಾಗಿರುವ ಆಳುವರ್ಗಗಳ ಹಿಡಿತವನ್ನೇ ಕಿತ್ತೊಗೆದು ಜನರ ಪರ್ಯಾಯ ಅಧಿಕಾರವನ್ನು ನಿರ್ಮಿಸುವ ಕಾರ್ಯದಲ್ಲಿ ಮುಂದೆ ಸಾಗುತ್ತಿದ್ದಾರೆ. ದೇಶದ ಜನರಿಗೆ ಹೋರಾಟದ ಹಲವಾರು ಪ್ರಮುಖ ಪಾಠಗಳನ್ನು ತೋರಿಸಿ ಕೊಟ್ಟಿದ್ದಾರೆ. ಚತ್ತೀಸ್‌ಗಡ, ಜಾರ್ಖಂಡ್, ಬಿಹಾರ, ಒಡಿಸ್ಸ, ಪಶ್ಚಿಮಬಂಗಾಳಗಳಲ್ಲಿ ಜನತೆಯ ಕ್ರಾಂತಿಕಾರಿ ಅಧಿಕಾರ ಹಾಗೂ ಜನತೆಯ ಕ್ರಾಂತಿಕಾರಿ ಪರ್ಯಾಯ ಅಭಿವೃದ್ಧಿಗಳು ವೇಗ ಪಡೆದುಕೊಳ್ಳುತ್ತಿವೆ.

ಕರ್ನಾಟಕದ ಜನರು ಈ ಪಾಠಗಳನ್ನು ಗ್ರಹಿಸಿ ತಮ್ಮ ಹೋರಾಟಗಳಲ್ಲಿ ಅಳವಡಿಸಿಕೊಳ್ಳುವ ಅಗತ್ಯ ಇದೆ. ಇಲ್ಲದಿದ್ದಲ್ಲಿ ತಮ್ಮ ಬದುಕು ಹಾಗೂ ನಾಡನ್ನು ಉಳಿಸಿಕೊಳ್ಳಲು ಅಸಾಧ್ಯವಾಗಬಹುದು. ವಿದೇಶಿ ಹಿತಾಸಕ್ತಿಗಳು, ಸರ್ಕಾರಗಳು ಮತ್ತು ಸ್ಥಾಪಿತ ಹಿತಾಸಕ್ತಿಗಳು ಎಲ್ಲಾ ಸೇರಿಕೊಂಡು ನಮ್ಮ ದೇಶದ ಭೂಮಿ ಹಾಗೂ ಜನರನ್ನು ಕೊಳ್ಳೆಹೊಡೆಯುತ್ತಿದ್ದಾರೆ. ಬ್ರಿಟೀಷರು ಭಾರತ ಬಿಟ್ಟು ಹೋದ ಮೇಲೆ ಅಭಿವೃದ್ಧಿ ಹೆಸರಿನಲ್ಲಿ ಕೋಟ್ಯಾಂತರ ಜನರ ಬದುಕುಗಳನ್ನು ನಾಶ ಮಾಡಲಾಗಿದೆ. ಈಗ ಇದು ಮತ್ತೂ ಬಿರುಸಿನಿಂದ ನಡೆಸ'ಲಾಗುತ್ತಿದೆ.

ಈಗಾಗಲೆ ಜನರ ಬದುಕುಗಳನ್ನು ನಾಶ ಮಾಡಿ ನಿರ್ಮಾಣ ಮಾಡಿರುವ ಥರ್ಮಲ್ ಸ್ಥಾವರಗಳು ಸ್ಥಾಪನೆಯ ಸಮಯದಲ್ಲಿ ಭರವಸೆ ಕೊಟ್ಟಂತಹ ತಮ್ಮ ಸಾಮರ್ಥ್ಯದ ಪೂರ್ಣ ಪ್ರಮಾಣದಲ್ಲಿ ಎಂದಿಗೂ ಕೂಡ ವಿದ್ಯುತ್ ಉತ್ಪಾದನೆ ಮಾಡಿದ ಉದಾಹರಣೆ ಇಲ್ಲ. ರಾಯಚೂರಿನ ಸ್ಥಾವರದ ಅನಾಹುತಗಳ ಉದಾಹರಣೆ ನಮ್ಮ ಮುಂದಿದೆ. ವಾತಾವರಣವೆಲ್ಲಾ ಹಾರುಬೂದಿ, ಉಷ್ಣತೆಯ ತೀವ್ರ ಹೆಚ್ಚಳ, ಸ್ಥಳೀಯರಿಗೆ ಕೊಟ್ಟ ಭರವಸೆಯಂತೆ ಉದ್ಯೋಗ ನೀಡದಿರುವುದು, ಸುತ್ತಮುತ್ತಲಿನ ಭೂಮಿಯ ಕೃಷಿ ಸಾಮರ್ಥ್ಯ ಹಾಳು ಮಾಡಿರುವುದು... .. .. ಹೀಗೆ ಪಟ್ಟಿ ಇದೆ. ಇಷ್ಟೆಲ್ಲಾ ಇದ್ದರೂ ವಿದ್ಯುತ್ ಉತ್ಪಾದನೆಯಾದರೂ ಇದೆಯಾ ಎಂದರೆ ಅದೂ ಇಲ್ಲ. ವರ್ಷದ ಎಲ್ಲಾ ದಿನಗಳಲ್ಲೂ ಎರಡಕ್ಕೂ ಹೆಚ್ಚು ಘಟಕಗಳು ಸ್ಥಗಿತವಾಗಿರುತ್ತವೆ. ಚಾಲನೆಯಲ್ಲಿರುವ ಘಟಕಗಳಾದರೂ ಪೂರ್ಣ ಪ್ರಮಾಣದಲ್ಲಿ ಉತ್ಪಾದನೆ ಮಾಡುತ್ತಿವೆಯಾ ಎಂದರೆ ಅದೂ ಇಲ್ಲ. ಉತ್ಪಾದನೆ ಆದ ವಿದ್ಯುತ್ ಸುತ್ತಮುತ್ತಲಿನ ಹಳ್ಳಿಗಳ ಜನರಿಗೇ ಸಿಗುವುದಿಲ್ಲ. ಬಹುತೇಕ ಬೆಂಗಳೂರು ನಗರಕ್ಕೆ ಹಾಗೂ ದೊಡ್ಡ ಕೈಗಾರಿಕೆಗಳಿಗೆ ಪೂರೈಸಲಾಗುತ್ತದೆ. ರೈತರ ಪಂಪುಸೆಟ್ಟುಗಳಿಗೆ ಹಳ್ಳಿಗಳ ಮನೆಗಳಿಗೆ ಸರಬರಾಜು ಆಗುವುದಿಲ್ಲ. ಆದರೆ ಇಂತಹ ಯೋಜನೆಗಳಿಗೆ ತಮ್ಮ ಬದುಕನ್ನು ಬಲಿಕೊಡಬೇಕಾದವರು ಹಳ್ಳಿಗಳು ಮತ್ತು ರೈತಾಪಿಗಳಾಗಿರುತ್ತಾರೆ. ಕೋಟ್ಯಾಂತರ ರೂಪಾಯಿ ಜನರ ತೆರಿಗೆಯ ಹಣವನ್ನು ಖರ್ಚು ಮಾಡಿ

ಜನರ ಬದುಕನ್ನು ನಾಶ ಮಾಡಿ ನಿರ್ಮಿಸುವ, ಮೆಟ್ರೋಪಾಲಿಟನ್ ನಗರಗಳು ಹಾಗೂ ದೊಡ್ಡ ಉದ್ದಿಮೆಗಳ ಹಿತಾಸಕ್ತಿ ಮಾತ್ರ ಕಾಪಾಡುವ ಇಂತಹ ಸ್ಥಾವರಗಳನ್ನು ಜನರು ಸಹಿಸಿಕೊಳ್ಳಬಾರದು.

ಇಂತಹ ಸ್ಥಾವರಗಳ ನಿರ್ಮಾಣದ ಬದಲಿಗೆ ಸಣ್ಣ ಮತ್ತು ಮಧ್ಯಮ ಗಾತ್ರದ ಪರ್ಯಾಯ ಶಕ್ತಿ ಮೂಲಗಳ ನಿರ್ಮಾಣ ಮಾಡಬೇಕು. ಅದು ಸೌರ, ಸಣ್ಣ ತೊರೆಗಳು ಝರಿಗಳ ಬಳಕೆ, ಗಾಳಿ, ನೈಸರ್ಗಿಕ ಅನಿಲಗಳ ಬಳಕೆ ಇತ್ಯಾದಿ ಆಗಬಹುದು. ಅಂದರೆ ಜನರು ಹಾಗೂ ಪರಿಸರಕ್ಕೆ ಹಾನಿ ಮಾಡದ ಪರ್ಯಾಯ ಯೋಜನೆಗಳನ್ನು ರೂಪಿಸಬೇಕು.

- **ಸರ್ಕಾರ ಕೂಡಲೇ ಈ ಅಕ್ರಮ ಯೋಜನೆ ರದ್ದುಗೊಳಿಸಿ ಜನರನ್ನು ಬಲವಂತದಿಂದ ಒಕ್ಕಲೆಬ್ಬಿಸುವುದನ್ನು ಕೈ ಬಿಡಬೇಕು.**
- **ಹೋರಾಟ ನಿರತ ಜನರ ಮೇಲೆ ಹಾಕಿರುವ ಎಲ್ಲಾ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕು.**
- **ಜನರ ಮೇಲೆ ದೌರ್ಜನ್ಯ ನಡೆಸಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು.**

**ಗಂಗಾಧರ**

**19-05-2010** **ಸಿ.ಪಿ.ಐ (ಮಾವೋವಾದಿ)**

**ಕರ್ನಾಟಕ**